ಲೋಕೋಪಯೋಗಿ ಇಲಾಖೆಗೆ ದಿನಾಂಕ: 7.7.2010ರಂದು ಮರು ಹಸ್ತಾಂತರಗೊಂಡ ನಂತರ ರಸ್ತೆ ದುರಸ್ತಿ ಕೈಗೊಳ್ಳಲು ಅರಣ್ಯ ಇಲಾಖೆಯ ಅನುಮತಿ ಪಡೆಯಲು ಪತ್ರ ವ್ಯವಹಾರ ಮಾಡಲಾಗಿದ್ದು ಇದುವರೆಗೆ ಅನುಮತಿಯು ದೊರೆತಿರುವುದಿಲ್ಲ.

ಈ) ಅರಣ್ಯ ಇಲಾಖೆಯೊಂದಿಗೆ ರಸ್ತೆ ಅಭಿವೃದ್ಧಿ ಕೆಲಸವನ್ನು ಪ್ರಾರಂಭಿಸಲು ಪತ್ರ ವ್ಯವಹಾರ ಮಾಡಲಾಗಿದ್ದು, ಅನುಮತಿ ಪಡೆದು 2011–12ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಯನ್ನು ಸೇರ್ಪಡೆಗೊಳಿಸಿ ಕೈಗೊಳ್ಳಲಾಗುವುದು.

ಉ) ಸರ್ಕಾರದ ಗಮನಕ್ಕೆ ಬಂದಿದೆ.

ಊ) ಅರಣ್ಯ ಇಲಾಖೆಯಿಂದ ನಿರಪೇಕ್ಷಣಾ ಪತ್ರಕ್ಕಾಗಿ ಈಗಾಗಲೇ ಕೋರಲಾಗಿದ್ದು ಪೂರ್ಣ ಪ್ರಮಾಣದಲ್ಲಿ ಅನುಮತಿ ಬಂದ ನಂತರ 2011–12ನೇ ಸಾಲಿನ ಆಯವ್ಯಯದಲ್ಲಿ ಈ ಕಾಮಗಾರಿಯನ್ನು ಸೇರ್ಪಡೆಗೊಳಿಸಿ ಕಾಮಗಾರಿಯನ್ನು ಕೈಗೊಳ್ಳಲಾಗುವುದು.

ರೈತರು ಮತ್ತು ಕೃಷಿ ಕಾರ್ಮಿಕ ಕುಟುಂಬಗಳಿಗೆ ಪರಿಹಾರ ಧನ

293 (279) ಶ್ರೀ ವಸಂತ ಬಂಗೇರ ಕೆ. (ಬೆಳ್ತಂಗಡಿ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಾವು ಕಡಿತದಿಂದ ತೆಂಗು, ಅಡಿಕೆ ಮರಗಳಿಂದ ಅಥವಾ ಇತರ ಕೃಷಿ ಸಂಬಂಧಿತ ಆಕಸ್ಮಿಕಗಳಿಂದ ಮರಣ ಹೊಂದಿದ ರೈತ, ಕೃಷಿ ಕಾರ್ಮಿಕ ಕುಟುಂಬಗಳಿಗೆ 1 ಲಕ್ಷ ಪರಿಹಾರ ಧನ ನೀಡುವ ಬಗ್ಗೆ ಸರಕಾರ ಘೋಷಿಸಿದ್ದು ನಿಜವಲ್ಲವೆ ; ಹಾಗಿದ್ದಲ್ಲಿ, ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕಿನ ಕೃಷಿ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರುವ ಸಮಿತಿಯನ್ನು ರಚಿಸಲಾಗಿರುವ ತಾಲ್ಲೂಕುಗಳ ಸಂಖ್ಯೆ ಎಷ್ಟು ;

ಆ) ಈವರೆಗೆ ಈ ಯೋಜನೆಯಡಿ ಪರಿಹಾರ ನೀಡಲಾಗಿರುವ ಮರಣ ಹೊಂದಿದ ರೈತರ ಸಂಖ್ಯೆ ಎಷ್ಟು ; (ಪೂರ್ಣ ವಿವರ ಒದಗಿಸುವುದು) ?

ಶ್ರೀ ಉಮೇಶ್ ವಿ. ಕತ್ತಿ (ಕೃಷಿ ಸಚಿವರು):

ಅ) ಹಾವು ಕಡಿತದಿಂದ ತೆಂಗು, ಅಡಿಕೆ ಮರಗಳಿಂದ ಅಥವಾ ಇತರ ಕೃಷಿ ಸಂಬಂಧಿತ ಆಕಸ್ಮಿಕಗಳಿಂದ ಮರಣ ಹೊಂದಿದ ರೈತ, ಕೃಷಿ ಕಾರ್ಮಿಕ ಕುಟುಂಬಗಳಿಗೆ ರೂ. 1 ಲಕ್ಷ ಪರಿಹಾರ ಧನ ನೀಡಲಾಗುತ್ತಿದೆ. ಎಲ್ಲಾ 176 ತಾಲ್ಲೂಕುಗಳಲ್ಲಿ ಉಪ ವಿಭಾಗಾಧಿಕಾರಿಗಳ ಅಧ್ಯಕ್ಷತೆಯಲ್ಲಿ ತಾಲ್ಲೂಕಿನ ಸಹಾಯಕ ಕೃಷಿ ನಿರ್ದೇಶಕರು ಸದಸ್ಯ ಕಾರ್ಯದರ್ಶಿಯಾಗಿರುವ ಸಮಿತಿಯನ್ನು ರಚಿಸಲಾಗಿದೆ.

ಆ) ಈ ಯೋಜನೆಯಡಿ ಈವರೆಗೆ (21.2.2011 ರವರೆಗೆ) ಮರಣ ಹೊಂದಿದ 55 ಅರ್ಹ ಪ್ರಕರಣಗಳಿಗೆ ಪರಿಹಾರ ವಿತರಿಸಲಾಗಿದೆ. ವಿವರ ಈ ಕೆಳಗಿನಂತಿದೆ:

ಹಾವು ಕಡಿದು ಮರಣ ಹೊಂದಿದ ಅರ್ಹ ಪ್ರಕರಣಗಳು – 44

ಕೃಷಿ ಆಕಸ್ಮಿಕದಿಂದ ಮರಣ ಹೊಂದಿದ ಅರ್ಹ ಪ್ರಕರಣಗಳು – 08

ಮರದಿಂದ ಬಿದ್ದು ಮರಣ ಹೊಂದಿದ ಅರ್ಹ ಪ್ರಕರಣಗಳು – 03